**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ**

C.C No.62/2017
CW-17 PW-5

ಹೆಸರು ಃ ಗುರುಮೂರ್ತಯ್ಯ ಸ್ವಾಮಿ

ತಂದೆ ಹೆಸರು ಃ ಶಿವಶಂಕ್ರಯ್ಯ

ವಯಸ್ಸು ಃ 34 ವರ್ಷ

ಉದ್ಯೋಗ ಃ ವ್ಯಾಪಾರ

ವಾಸ ಸ್ಥಳ ಃ ಕೋರವಾರ.

---

**ಪ್ರಮಾಣವಚನ ಭೋಧಿಸಲಾಯಿತು. ದಿಃ 18-02-2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ**

ನನಗೆ ಚಾಸಅ-16ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸುಮಾರು 8 ವರ್ಷಗಳ ಹಿಂದೆ ನಾನು ಮಾಡಬೂಳ ಪೊಲೀಸ ಠಾಣೆಗೆ ಹೋದಾಗ, ಪೊಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದಿದ್ದರು. ಸಾಕ್ಷಿಯು ನಿಶಾನೆ ಪಿ-5ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-5(ಬಿ) ಎಂದು ಗುರುತಿಸಲಾಯಿತು.

ಪೊಲೀಸರು ನನಗೆ ಯಾವುದೇ ಅಪಘಾತವಾದ ಸ್ಥಳವನ್ನು ತೋರಿಸಿರುವುದಿಲ್ಲ, ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿನಾಂಕ: 08-10-2016ರಂದು ಮಧ್ಯಾಹ್ನ 1-00 ಗಂಟೆಯಿಂದ 2-00 ಗಂಟೆಯವರೆಗೆ ಪೊಲೀಸರು ನನ್ನ ಸಮಕ್ಷಮ ನಿಶಾನೆ ಪಿ-5 ರಂತೆ ಒಂದು ಪಂಚನಾಮೆ ಕ್ರಮ ಜರುಗಿಸಿ ನನಗೆ ಅಪಘಾತವಾದ ಸ್ಥಳವನ್ನು ತೋರಿಸಿ, ನನ್ನ ಸಮಕ್ಷಮ ಒಂದು ಹಿರೋ ಹೊಂಡಾ ಮೋಟಾರ ಸೈಕಲ್ ಸಂಖ್ಯೆ: ಕೆಎ-25/ಕ್ಯೂ-8522 ನೇದ್ದನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಶಾನೆ ಪಿ-5ರಲ್ಲಿ ಬರೆದಿರುವ

ವಿಷಯಗಳು ನನಗೆ ಗೊತ್ತಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಎನ್.ಪಿ. ವಕೀಲರಿಂದ - ಏನು ಇಲ್ಲಾ</u>**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.